

ನಗರಗಳ ಕಸ ಸುರಿಯುವುದರ ವಿರುದ್ಧ ಹಳ್ಳಿಗರು ನಡೆಸುವ ಹೋರಾಟಗಳು, ಬುದ್ಧಿಜೀವಿಗಳ ಕ್ರೂರ ಹತ್ಯೆಗಳ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳು, ಈಚೆಗೆ ಲಿಂಗಾಯತ ಧರ್ಮದ ಬೇಡಿಕೆಯಿಟ್ಟು ಲಕ್ಷಾಂತರ ಜನ ಬಸವ ಅನುಯಾಯಿಗಳು ಸೇರಿ ಹಲವೆಡೆ ಮಾಡಿದ ಹಕ್ಕೊತ್ತಾಯಗಳು – ಇವೆಲ್ಲವೂ ಬಹುತೇಕ ಶಾಂತಿಯುತ ಮಾರ್ಗದಲ್ಲೇ ನಡೆಯುತ್ತಿವೆ. ಪ್ರಬಲ ದೇಶಗಳು ಸಣ್ಣಪುಟ್ಟ ದೇಶಗಳ ಮೇಲೆ ನಡೆಸುವ ಹಿಂಸೆಗಳ ವಿರುದ್ಧ ಅಥವಾ ಆಯಾ ದೇಶಗಳೊಳಗೇ ಸರ್ಕಾರಗಳು ವಿರೋಧ ಪಕ್ಷಗಳ ಮೇಲೆ, ವಿರೋಧಿ ನಾಯಕರ ಮೇಲೆ, ಭಿನ್ನ ಅಭಿಪ್ರಾಯಗಳನ್ನು ಹೊಂದಿರುವ ಚಿಂತಕ, ಚಿಂತಕಿಯರ ಮೇಲೆ ಪ್ರಯೋಗಿಸುವ ಹಿಂಸೆಗಳ ವಿರುದ್ಧ ಕೂಡ ಗಾಂಧೀ ಮಾರ್ಗದ ಸಂಘಟಿತ ಅಹಿಂಸಾತ್ಮಕ ವಿರೋಧ ನಡೆಯುತ್ತಿರುತ್ತದೆ. ಎಪ್ಪತ್ತರ ದಶಕದ ತುರ್ತು ಪರಿಸ್ಥಿತಿಯಲ್ಲಿ ವಿರೋಧ ಪಕ್ಷಗಳಿಗೆ ಆಸರೆಯಾದ ಗಾಂಧೀವಾದವೇ ಇವತ್ತಿನ ಅಘೋಷಿತ ತುರ್ತು ಪರಿಸ್ಥಿಯಲ್ಲೂ ನಮ್ಮ ನೆರವಿಗೆ ಬರುತ್ತಿದೆ ಎಂಬುದನ್ನು ಮರೆಯಬಾರದು.



ಐರೋಮ್ ಶರ್ಮಿಲಾ

ಕೆಲವು ವರ್ಷಗಳ ಕೆಳಗೆ ಹಳ್ಳಿಗರು ಮರಗಳನ್ನು ತಬ್ಬಿಕೊಂಡು ಅವುಗಳನ್ನು ಕಡಿಯದಂತೆ ಉಳಿಸಿದ ಚಿಪ್ಕೋ ಆಂದೋಲನ, ಕೋಮುವಾದ ವಿರೋಧಿ ಚಳವಳಿ, ಜಗತ್ತಿನ ತುಂಬ ನಡೆಯುತ್ತಿರುವ ಪರಿಸರ ಚಳವಳಿಗಳು, ಮಹಿಳಾ ಹೋರಾಟಗಳು, ಜನಾಭಿಪ್ರಾಯ ರೂಪಿಸುವ ಪತ್ರಗಳ ಅಥವಾ ಡಿಜಿಟಲ್ ಚಳವಳಿಗಳು, ಮಾನವಿ ಚಳವಳಿಗಳು, ಕೋರ್ಟುಗಳ ಎದುರು ಜನಸಮುದಾಯಗಳ ಹಕ್ಕುಗಳ ಪ್ರಶ್ನೆಗಳನ್ನು, ವ್ಯಕ್ತಿಸ್ವಾತಂತ್ರ್ಯದ ಪ್ರಶ್ನೆಗಳನ್ನು ಒಯ್ಯುವ ವ್ಯಕ್ತಿಗಳು, ನ್ಯಾಯವಾದಿಗಳು, ಸಂಘಟನೆಗಳು, ಚಳವಳಿಗಾರರು, ಸತ್ಯವಾದದ್ದನ್ನು ಬರೆದು ತಮ್ಮ ಪ್ರತಿಭಟನೆಯನ್ನು ದಾಖಲು ಮಾಡುತ್ತಿರುವ ಪ್ರಾಮಾಣಿಕ ಪತ್ರಕರ್ತರು, ಬುದ್ಧಿಜೀವಿಗಳು, ಲೇಖಕ, ಲೇಖಕಿಯರ ಪ್ರಯತ್ನಗಳು – ಈ ಎಲ್ಲ ಬೆಳವಣಿಗೆಗಳು ಏನನ್ನು ಸೂಚಿಸುತ್ತಿವೆ? ಗಾಂಧೀ ಚಿಂತನೆಯನ್ನು ಪೂರ್ಣವಾಗಿ ಒಪ್ಪಲಿ ಬಿಡಲಿ, ಈ ಎಲ್ಲ ಜನರು ಹಾಗೂ ಸಂಘಟನೆಗಳ ನಾಯಕರು, ಅನುಯಾಯಿಗಳು ಇವತ್ತಿಗೂ ಒಂದಲ್ಲ ಒಂದು ರೀತಿಯಲ್ಲಿ ಗಾಂಧೀಜಿ ರೂಪಿಸಿಕೊಟ್ಟ ಚಳವಳಿಯ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆ ಎಂಬುದೇ ಇದರ ಅರ್ಥ, ಅಲ್ಲವೆ?

ಗಾಂಧೀಜಿಯ ಜೊತೆಜೊತೆಗೇ ರೂಪುಗೊಂಡಿರುವ ಭಾರತದ ಪ್ರಜಾಪ್ರಭುತ್ವದಲ್ಲಿ ಅಹಿಂಸಾತ್ಮಕ ಚಳವಳಿಗಳು ಹಾಗೂ ಮತದಾನದ ಅಸ್ತ್ರಗಳು ಇನ್ನೂ ಪ್ರಸ್ತುತವಾಗಿವೆ ಎಂಬುದನ್ನು ಕೂಡ ಈ ಬೆಳವಣಿಗೆಗಳು ಸೂಚಿಸುತ್ತವೆ. ಆದರೆ ಇವತ್ತಿನ ಕಟು ವಾಸ್ತವಗಳ ಹಿನ್ನೆಲೆಯಲ್ಲಿ ಈ ಕಾಲದ ಮನುಷ್ಯರು ಹಾಗೂ ವ್ಯವಸ್ಥೆಗಳು ಸೃಷ್ಟಿ ಮಾಡುವ ವ್ಯವಸ್ಥಿತ ಹಿಂಸೆಯ ಬಗ್ಗೆ ನಾವು ಎಚ್ಚರ ಇರಿಸಿಕೊಳ್ಳಲೇಬೇಕಾಗುತ್ತದೆ. ಯಾವ ಯಾವ ರೀತಿಯಲ್ಲಿ ಇತರರನ್ನು ಹಿಂಸೆ ಮಾಡಬಹುದು ಎಂದು ಹಿತಾಸಕ್ತ ಗುಂಪುಗಳು ಸಂಶೋಧನೆಯಲ್ಲಿ